## ‘ಸರಿಗಮಪ’ದಲ್ಲಿ ಬದಲಾವಣೆ

ಝೀ ಕನ್ನಡದ ‘ಸರಿಗಮಪ’ದಲ್ಲಿ ಗಮನಾರ್ಹ ಬದಲಾವಣೆ ಕಾಣುತ್ತಿದೆ. ಸ್ಪರ್ಧಿಗಳು ಮೊದಲಿನಂತೆ ಬೆಂಗಳೂರು, ಮೈಸೂರಿಗೆ ಸೀಮಿತವಾಗದೇ ಕರ್ನಾಟಕದ ಮೂಲೆ ಮೂಲೆಯಿಂದ ಬಂದಿರುವುದು ಮತ್ತು ಸಂಗೀತದಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಒತ್ತು ಕೊಟ್ಟಿರುವುದನ್ನು ವೀಕ್ಷಕರು ಗಮನಿಸುತ್ತಿದ್ದಾರೆ.

ಪ್ರತಿ ಸ್ಪರ್ಧಿಯಲ್ಲೂ ಬದ್ಧತೆ ಮತ್ತು ಗಂಭೀರತೆ ಎದ್ದು ಕಾಣುತ್ತದೆ. ತೀರ್ಪುಗಾರರ ಸಮಯೋಚಿತ, ಅರ್ಥಪೂರ್ಣ ವಿಶ್ಲೇಷಣೆ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದೆ. ನಿರೂಪಕಿಯ ಹಿತವಾದ ಮಾತು ಅತ್ಯುತ್ತಮ ಎಂದು ಅನಿಸುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ಇದೇನು ನೀತಿಯೋ ಅನೀತಿಯೋ



ಕಲರ್ಸ್ ಕನ್ನಡದ ‘ಲಕ್ಷಣ’ದಲ್ಲಿ ಗಂಡ ಹೆಂಡತಿಯನ್ನು ಅನುಮಾನಿಸುತ್ತಾನೆ. ನಕ್ಷತ್ರ ನನ್ನ ಮಗಳಲ್ಲ ಎಂದು ಹೆಂಡತಿಯನ್ನು ಹಾಗೂ ಮಗಳನ್ನು ಡಿಎನ್ಎ ಪರೀಕ್ಷೆ ಮಾಡಿಸಲು ಒತ್ತಡ ಹೇರುವುದು, ಮಗಳನ್ನು ಕಪ್ಪು ಎಂದು ಜರಿಯುವುದು, ಅಜ್ಜಿಯು ಮೊಮ್ಮಗಳನ್ನು ಕಂಡೊಡನೆ ನಡೆ ನುಡಿಯನ್ನು ಹೀಯಾಳಿಸುವುದು, ನಕ್ಷತ್ರ ಎಲ್ಲರ ಎದುರು ಅಪ್ಪನ ಕೆನ್ನೆಗೆ ಹೊಡೆಯುವುದು, ತನಗೆ ಹಾಗೂ ತನ್ನ ತಾಯಿಗೆ ಬಂದ ಕಳಂಕವನ್ನು ದೂರಮಾಡಲು ಅಪ್ಪನ ಬಲವಂತಕ್ಕೆ ಡಿಎನ್ಎ ಪರೀಕ್ಷೆಗೆ ಒಳಗಾಗುವುದು ನೋಡಿದರೆ ಇದರಲ್ಲಿ ಯಾವ ಜೀವನ ಮೌಲ್ಯ ಇದೆ. ಈ ಧಾರಾವಾಹಿ ಯಾವ ನೀತಿಯನ್ನು ಹೇಳಲು ಹೊರಟಿದೆ? ಹೆಣ್ಣಿಗೆ ಗೌರವ ಕೊಡದ ಕಥೆಗಳು ಪ್ರಸಾರಕ್ಕೆ ಯೋಗ್ಯವಲ್ಲ.

—ಎಂ.ಎಸ್. ಉಷಾ ಪ್ರಕಾಶ್

## ಡಾನ್ಸ್ ಸರ್ಕಸ್ ಡಾನ್ಸ್

ಝೀ ಕನ್ನಡದ ‘ಡಾನ್ಸ್ ಕರ್ನಾಟಕ ಡಾನ್ಸ್’ನಲ್ಲಿ ನೃತ್ಯ ವಿಜೃಂಭಿಸದೇ ಸರ್ಕಸ್ ಪ್ರದರ್ಶನಗೊಳ್ಳುತ್ತದೆ ಎಂದು ಅನಿಸುತ್ತದೆ. ನೃತ್ಯವೆಂದೇ ಹೆಸರಿಟ್ಟ ಈ ಕಾರ್ಯಕ್ರಮದಲ್ಲಿ ರೋಮಾಂಚನ ನೀಡುವ ಸರ್ಕಸ್‌ಗೆ ಆದ್ಯತೆ ನೀಡಲಾಗುತ್ತದೆ.

ಅದನ್ನು ‘ಡಾನ್ಸ್ ಸರ್ಕಸ್ ಡಾನ್ಸ್’ ಎಂದೇ ಬದಲಾಯಿಸುವುದು ಒಳ್ಳೆಯದು. ಪಾರಂಪರಿಕ ಜನಪದ ನೃತ್ಯ, ಸುಗ್ಗಿಯ ಕುಣಿತಗಳು ರೋಮಾಂಚನಗೊಳಿಸುವ ಇನ್ನೂ ಅನೇಕ ನೃತ್ಯ ಪ್ರಕಾರಗಳಿವೆ. ನೃತ್ಯದಲ್ಲಿ ಸರ್ಕಸ್ ಮಾಡಲು ಹೋಗಿ ಮಕ್ಕಳ ಕೈ ಕಾಲು ಮುರಿಯಬಾರದು ಅಷ್ಟೇ. ಪ್ರದರ್ಶನ ಮಾಡುತ್ತಿರುವಾಗ ತೀರ್ಪುಗಾರರ ಅಂಜಿಕೆ, ಆತಂಕ ನೋಡಿದರೆ ಗೊತ್ತಾಗುತ್ತದಲ್ಲವೇ? ಫಿನಾಲೆಯಲ್ಲಿ ಸ್ಪರ್ಧೆಯ ತುರುಸಿನಿಂದ ಮೆಂಟರ್‌ಗಳು ಮಕ್ಕಳ ಕೈಕಾಲು, ತಲೆ ಮುರಿಯದ ಹಾಗೆ ನೋಡಿಕೊಂಡರೆ ಸಾಕು.

—ಅಮೀನಾ ರಾಮನಮಲಿ, ಹರಪನಹಳ್ಳಿ

ವಾರದ ಪತ್ರ

## ನಿರ್ಲಕ್ಷ್ಯ ಸಲ್ಲದು

‘ಸುವರ್ಣ ಸೂಪರ್ ಸ್ಟಾರ್’ ಅತ್ಯುತ್ತಮ ಕಾರ್ಯಕ್ರಮ. ಕೆಲವು ವಿಶೇಷ ದಿನಗಳಲ್ಲಿ ಸಂಬಂಧಪಟ್ಟವರನ್ನು ಸ್ಮರಿಸಿಕೊಳ್ಳುತ್ತಾ, ಹಬ್ಬಗಳ ಆಚರಣೆಗಳನ್ನು ಸ್ಟುಡಿಯೊದಲ್ಲಿ ಸಾಂಗವಾಗಿ ನೆರವೇರಿಸುತ್ತಾ, ತಮ್ಮ ಕಾಳಜಿಯನ್ನು ಮೆರೆಯುತ್ತಿದ್ದಾರೆ.

ಅಕ್ಟೋಬರ್ 2ರಂದು ಪ್ರಸಾರವಾದ ಒಂದು ಸಂಚಿಕೆಯಲ್ಲಿ ಲೋಪವಾಯಿತು. ಅಂದು ರಾಷ್ಟ್ರಪಿತ ಗಾಂಧೀಜಿಯವರನ್ನು ಸ್ಮರಿಸುತ್ತಾ ಅವರ ಪಾದಾರವಿಂದಗಳಿಗೆ ನಮಿಸುತ್ತಾ, ಕಾರ್ಯಕ್ರಮವನ್ನು ಶುರುಮಾಡಿದರು. ಆದರೆ ಅಂದೇ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನವೂ ಆಗಿತ್ತು ಎಂಬುದನ್ನು ಏಕೆ ಮರೆತರು? ಅವರೇನು ಮಹಾನ್ ಸಾಧಕರಲ್ಲವೇ? ಅವರು ದೇಶಕ್ಕೆ ಕೊಟ್ಟ ಕೊಡುಗೆಗಳೇನು ಕಡಿಮೆಯೇ? ರಾಷ್ಟ್ರವ್ಯಾಪಿ ಪ್ರಸಿದ್ಧಿಯಾಗಿರುವ ಜವಾಬ್ದಾರಿಯುತ ವಾಹಿನಿಗಳಿಂದ ಇಂಥ ನಿರ್ಲಕ್ಷ್ಯ ಸಲ್ಲದು.

—ಪುಷ್ಪ ಎನ್.ಕೆ. ರಾವ್

## ಮೆಚ್ಚುವ ಕಾರ್ಯ

ಕನ್ನಡ ಕೆಲವು ಧಾರಾವಾಹಿಗಳು ಸಿನಿಮಾಕ್ಕಿಂತಲೂ ಮಿಗಿಲಾಗಿ ವೈಭವದಿಂದ ಮೂಡಿ ಬರುತ್ತಿವೆ. ಉತ್ತಮ ದೃಶ್ಯ, ಉತ್ತಮ ಸಂಭಾಷಣೆ, ಅದಕ್ಕೆ ತಕ್ಕಂತೆ ಭಾವಾಭಿನಯ ಎಲ್ಲವೂ ಮೇಳೈಸಿ ಮರೆಯದೆ ನೋಡುವಂತೆಯೂ ಮಾಡುತ್ತಿವೆ. ಇಷ್ಟೆಲ್ಲ ವೈಭವೋಪೇತವಾಗಿ ಒಡಮೂಡಿ ಬರುತ್ತಿದ್ದರೂ ಎಲ್ಲಿಯೂ ಚಲನಚಿತ್ರಗಳಂತೆ ಅಶ್ಲೀಲದ ಸೋಂಕಿಲ್ಲ. ಬದಲಿಗೆ ಎಲ್ಲ ವಯೋಮಾನದವರು ಕುಳಿತು ತಾಳ್ಮೆಯಿಂದ ನೋಡುವಂತೆಯೂ ಮಾಡಿವೆ.

ಚಿತ್ರರಂಗದಲ್ಲಿ ಹೆಚ್ಚು– ಕಡಿಮೆ ತುಂಡು ಬಟ್ಟೆಗೆ ಮೊದಲ ಆದ್ಯತೆ! ಇದಕ್ಕೆಲ್ಲ ವಿರೋಧವೆಂಬಂತೆ ಧಾರಾವಾಹಿಯಲ್ಲಿನ ನಟಿಯರು ಎಲ್ಲರೂ ಒಪ್ಪಬಹುದಾದ ಉಡುಗೆ– ತೊಡುಗೆಗಳಿಗೆ ಆದ್ಯತೆ ನೀಡಿರುವುದು ನಿಜಕ್ಕೂ ಮೆಚ್ಚಬಹುದಾದ ಅಂಶ. ಒಟ್ಟಾರೆ, ಭಾರತೀಯ ಸಂಸ್ಕೃತಿಯನ್ನು ಉಳಿಸುತ್ತಿರುವುದು ಸ್ವಾಗತಿಸಿ ಮೆಚ್ಚುವಂಥದ್ದೇ ಆಗಿದೆ.

—ಶಂಕರೇಗೌಡ ತುಂಬಕೆರೆ, ಮಂಡ್ಯ

## ಹಾಡು ಹೆಚ್ಚಲಿ

ಝೀ ಕನ್ನಡದ ‘ಸರಿಗಮಪ’ ಪ್ರಾರಂಭದಲ್ಲಿ ನಿರೂಪಣೆ ಹತ್ತು ನಿಮಿಷ ಒಂದು ಹಾಡು, ಹತ್ತು ನಿಮಿಷ ತೀರ್ಪುಗಾರರ ಹಾಡಿನ ಬಗ್ಗೆ ವಿವರಣೆ. ಹತ್ತು ನಿಮಿಷ ಜಾಹೀರಾತು–ನಿರೂಪಣೆಯ ನಡುವೆ ನಾಲ್ಕು ಹಾಡುಗಳಿಗೆ ಕಾರ್ಯಕ್ರಮ ಸೀಮಿತ. ಮಾತು– ಜಾಹೀರಾತು ಕಡಿಮೆ ಮಾಡಿದರೆ ಕಾರ್ಯಕ್ರಮ ಕಳೆಗಟ್ಟುವುದರಲ್ಲಿ ಸಂಶಯವಿಲ್ಲ.

—ಎಂ.ಟಿ. ರಮಾನಂದ ರೆಡ್ಡಿ

## ನೀರಸ ನಿರೂಪಣೆ

ಕಲರ್ಸ್ ಕನ್ನಡದ ‘ಕನ್ನಡತಿ’ ಆರಂಭದಲ್ಲಿ ಬಹಳಷ್ಟು ಭರವಸೆ ಹುಟ್ಟಿಸಿತು. ಆದರೆ ಈಗೀಗ ಬಹಳ ನೀರಸವಾಗಿ ಮೂಡಿ ಬರುತ್ತಿದೆ. ನಾಯಕ ಹರ್ಷ ತಾನು ಭುವಿಯನ್ನು ಪ್ರೀತಿಸುತ್ತಿರುವ ವಿಷಯ ತಿಳಿಸಲು ವೀಕ್ಷಕರು ಇನ್ನೂ ಎಷ್ಟು ಕಾಲ ಕಾಯಬೇಕೊ?

—ಎಸ್. ರವೀಂದ್ರನಾಥ, ಬೆಂಗಳೂರು

## ಮರು ಪ್ರಸಾರ ಬೇಡ

ಜನಪ್ರಿಯ ಚಂದನದಲ್ಲಿ ‘ಗಾನಚಂದನ’, ‘ವಾರದ ವ್ಯಕ್ತಿ’ ಕಾರ್ಯಕ್ರಮಗಳು ಅದೇಕೋ ಪುನಃ ಪುನಃ ಪ್ರಸಾರ ಆಗುತ್ತಿವೆ. ಅದೂ ಬಹಳ ಕಡಿಮೆ ದಿನಗಳ ಅಂತರದಲ್ಲಿ! ವೀಕ್ಷಕರಿಗೆ ಸಹಜವಾಗಿ ಇದು ಬೋರ್ ಆಗುತ್ತದೆ. ಶೂಟಿಂಗ್ ಮಾಡಲು ಈಗ ಯಾವ ನಿರ್ಬಂಧವೂ ಇದ್ದಂತಿಲ್ಲ. ದಯಮಾಡಿ ಇನ್ನು ಮುಂದೆ ಚಂದನ ವಾಹಿನಿ ಕಾರ್ಯಕ್ರಮ ಪ್ರಸಾರದ ಪುನರಾವರ್ತನೆ ಆಗದಂತೆ ನಿಗಾ ವಹಿಸಲು ಕೋರಿಕೆ.

—ನಾರಾಯಣ ಯಾಜಿ ಶಿರಾಲಿ

## ಇದು ಕನ್ನಡ ಧಾರಾವಾಹಿ

ಇಲ್ಲಿನ ಚಿತ್ರಗಳನ್ನು ನೋಡಿ ತೆಲುಗು ಚಾನೆಲ್ ಅಂದುಕೊಂಡರೆ ತಪ್ಪಾದೀತು. ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ‘ಕೃಷ್ಣ ಸುಂದರಿ’ ಧಾರಾವಾಹಿಯಲ್ಲಿ ಪ್ರತೀ ದೃಶ್ಯ ತೆಲುಗುಮಯ. ವೇದಿಕೆಯ ಹಿಂಬದಿ ತೆಲುಗು ಫಲಕಗಳು. ಆದರೆ ಪಾತ್ರಧಾರಿಗಳು ನಿಂತಿರುವುದು ಬೆಂಗಳೂರಿನ ಜಯನಗರದ ಪ್ರದೇಶ ಅಂತಾ ಅದರ ನಿರ್ದೇಶಕ ವೀಕ್ಷಕರನ್ನು ನಂಬಿಸಿ ಬಿಂಬಿಸುತ್ತಾರೆ.

ವೇಷ ಭೂಷಣ ಕನ್ನಡದ ಪರಿಸರಕ್ಕೆ ಹೊಂದಿಕೆಯೇ ಆಗದು. ಇಂತಹ ಸಾಮಾನ್ಯ ಧಾರಾವಾಹಿಗಳನ್ನು ಪ್ರಸಾರ ಮಾಡುತ್ತಾ ಝೀ ಕನ್ನಡ ಕನ್ನಡಿಗರ ತಾಳ್ಮೆ ಸಹನೆ ಪರೀಕ್ಷಿಸುತ್ತಾ ಇರುವುದು ಅತ್ಯಂತ ಬೇಸರದ ಸಂಗತಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು